MYSORE LEGISLATIVE ASSEMBLY

TWENTY-FIFTH DAY.

Friday, 19th March 1954.

The House met in the Assembly Hall, Old Public Offices, Bangalore, at Twelve of the Clock.

MR. SPEAKER (SRI H. SIDDAIYA, B.A., LL.B.) in the Chair.

QUESTIONS AND ANSWERS.

Accommodation for Courts at Tiptur.

Q.—903. **Sri T.G. THIMME GOWDA** (Tiptur).—

Will the Government be pleased to state :—

(*a*) the total amount of rent paid annually to accommodate the courts of the Special First Class Magistrate and Munsiff at Tiptur ;

(*b*) whether they have contemplated any steps to save this enormous expenditure and construct their own buildings ?

A.—**Sri A. G. RAMACHANDRA RAO** (Minister for Law and Education).—

(*a*) Rs. 3,180 annually.

(*b*) The matter is under consideration of Government.

ಶ್ರೀ ಟಿ. ಜಿ. ತಿಮ್ಮೇಗೌಡ.—ಎಷ್ಟು ವರ್ಷಗಳಿಂದ ಈ ರೀತಿ ಬಾಡಿಗೆ ಕೊಡುತ್ತಾ ಇದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಹುಶಃ ಕೋರ್ಟು ಪ್ರಾರಂಭವಾದಂದಿನಿಂದ ಬಾಡಿಗೆ ಕಟ್ಟಡದಲ್ಲೇ ಇದೆ.

ಶ್ರೀ ಟಿ. ಜಿ. ತಿಮ್ಮೇಗೌಡ.—ಇಲ್ಲಿಯವರೆಗೂ ಒಟ್ಟು ಎಷ್ಟು ಮೊಬಲಗನ್ನು ಬಾಡಿಗೆಗೆ ಕೊಟ್ಟಿದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ವರ್ಷಕ್ಕೆ ಇಷ್ಟು ಎಂದು ಹೇಳಿ ಕೊಟ್ಟಿದೆ. ಅದನ್ನು ಲೆಕ್ಕಾಚಾರ ಮಾಡಿಲ್ಲ.

ಶ್ರೀ ಟಿ. ಜಿ. ತಿಮ್ಮೇಗೌಡ.—ಮುನ್ಸಿಫ್ ಕೋರ್ಟು ಮತ್ತು ಮ್ಯಾಜಿಸ್ಟ್ರೇಟ್ ಕೋರ್ಟುಗಳಿಗೆ ಕಟ್ಟಡ ಅತ್ಯವಶ್ಯಕವಾಗಿ ಬೇಕಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವಶ್ಯಕತೆ ಇದೆ.

ಶ್ರೀ ಟಿ. ಜಿ. ತಿಮ್ಮೇಗೌಡ.—ಸ್ವಂತ ಕಟ್ಟಡಗಳನ್ನು ಕಟ್ಟಿಸುವ ವಿಚಾರ ಪರ್ಯಾಲೋಚನೆಯಲ್ಲಿದೆ ಎಂದು ಉತ್ತರದಲ್ಲಿ ಕೊಟ್ಟಿದ್ದೀರಿ. ಎಷ್ಟು ವರ್ಷಗಳಿಂದ ಪರ್ಯಾಲೋಚನೆಯಲ್ಲಿದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೋರ್ಟು ಮೊದಲು ಹಂಗಾಮಿಯಾಗಿರಬೇಕೇ ಅಥವಾ ಖಾಯಂ ಆಗಿ ಇರಬೇಕೇ ಎಂಬ ಪ್ರಶ್ನೆ ಇತ್ತು. ಈಗ ನೋಡಿದ್ದರಲ್ಲಿ ಖಾಯಂ ಆಗಿ ಇರಬೇಕೆಂದು ಕಾಣುತ್ತಿದೆ. ಆದ್ದರಿಂದ ಇದನ್ನು ತೀರ್ಮಾನ ಮಾಡುತ್ತೇವೆ.

ಶ್ರೀ ಟಿ. ಜಿ. ತಿಮ್ಮೇಗೌಡ.—ಖಾಯಂ ಆಗಿ ಇರಬೇಕು ಎಂದು ಗಮನಕ್ಕೆ ಬಂದಮೇಲೆ ಕೂಡಲೇ ಕಟ್ಟಡ ಕಟ್ಟಿಸಲಿಕ್ಕೆ ಆಲೋಚನೆ ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪರ್ಯಾಲೋಚನೆ ಮಾಡುತ್ತೇನೆ.

ಶ್ರೀ ಟಿ. ಎಸ್. ಮುದಲಗಿರಿಗೌಡ.—ಸಬ್ ಡಿವಿಜ್ ಆಫೀಸು ಇರತಕ್ಕ ಕಟ್ಟಡದಲ್ಲೇ ಈ ಕೋರ್ಟು ನಡೆಸುವುದಕ್ಕೆ ಆಗುವುದಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ. ಡೆಪ್ಯುಟಿ ಕಮಿಷನರ ರಿಪೋರ್ಟಿನಲ್ಲಿ ಅದಕ್ಕೆ ಬೇರೆ ಇನ್ನಾವುದೂ ಕಟ್ಟಡ ಇಲ್ಲ ಎಂದು ರಿಪೋರ್ಟ್ ಮಾಡಿದ್ದಾರೆ.

College at Chikballapur.

Q.—968. **Sri A. MUNIYAPPA** (Sidlaghatta-Chikballapur — Scheduled Castes).—

Will the Government be pleased to state :—

(*a*) whether they intend to establish a College at Chikballapur ;

(*b*) whether any correspondence has taken place previously in this behalf ?

A.—**Sri A. G. RAMACHANDRA RAO** (Minister for Law and Education).—

(*a*) The matter has not been considered by the University.

(*b*) No.

ಶ್ರೀ ಎ. ಮುನಿಯಪ್ಪ.—ಹಿಂದೆ ಮುನಿಸಿಪಾಲಿಟಿಯವರು ಕಾಲೇಜು ಬೇಕೆಂದು ಮನವಿ ಏನಾದರೂ ಕಳುಹಿಸಿದ್ದಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಲ್ಲಿಂದ ಯಾವುದೂ ಬಂದದ್ದು ನನಗೆ ಗೊತ್ತಿಲ್ಲ.

ಶ್ರೀ ಎ. ಮುನಿಯಪ್ಪ.—ಇದು ಡಿಸ್ಟ್ರಿಕ್ಟಿಗೆ ಮಧ್ಯ ಪ್ರದೇಶ, ಆರೋಗ್ಯ ಸ್ಥಳ ; ಆದ್ದರಿಂದ ಇಲ್ಲಿ ಒಂದು ಕಾಲೇಜು ಸ್ಥಾಪನೆ ಮಾಡುವುದಕ್ಕೆ ನರ್ಸ್‌ಗಳವರು ಏನಾದರೂ ಆಲೋಚಿಸಿದ್ದಾರೆಯೇ ?